ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ಯವರ ನ್ಯಾಯಾಲಯ, ಚಾಮರಾಜನಗರ .

ಸಿಸಿ. 1806/2022

| | | | |
|---|---|---|---|
| ಸಾಕ್ಷಿದಾರರು ಹೆಸರು | : | ಶಿವಣ್ಣ | ದಿನಾಂಕಃ 11.07.2024ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು. |
| ತಂದೆಯ ಹೆಸರು | : | ಲೇಟ್ ಹನುಮೇಗೌಡ | |
| ವಯಸ್ಸು | : | 70ವರ್ಷ | |
| ಉದ್ಯೋಗ | : | ವ್ಯವಸಾಯ | **CW-2** |
| ವಾಸಸ್ಥಳ | : | ಪಣ್ಯದಹುಂಡಿ ಗ್ರಾಮ | **PW-2** |

ಮುಖ್ಯ ವಿಚಾರಣೆ : ಮಾನ್ಯ ಎಪಿಪಿರವರಿಂದಃ

1ನೇ ಆರೋಪಿ ನನ್ನ ಅಣ್ಣನ ಮಗ. 2ನೇ ಆರೋಪಿ ನಮ್ಮ ಊರಿನವರು. ಈ ದಿನ ನ್ಯಾಯಾಲಯದ ಮುಂದೆ 2ನೇ ಆರೋಪಿ ಹಾಜರಿದ್ದು, 1ನೇ ಆರೋಪಿ ಹಾಜರಿರುವುದಿಲ್ಲ. ಆರೋಪಿಗಳ ಗುರುತಿಸುವಿಕೆಯ ಬಗ್ಗೆ ತಕರಾರು ಇಲ್ಲಾ ಎಂದು ಆರೋಪಿಗಳ ಪರ ವಕೀಲರು ತಿಳಿಸಿರುತ್ತಾರೆ.

ಚಾಸಾ1 ನನ್ನ ಹೆಂಡತಿ. ಚಾಸಾ3 ನನ್ನ ಮೊಮ್ಮಗ. ಚಾಸಾ4 ಮತ್ತು 5ರವರು ಪರಿಚಯ ಇರುತ್ತಾರೆ. ಚಾಸಾ6 ನನ್ನ ಮಗ. ನಮಗೂ ಆರೋಪಿಗಳಿಗೂ ಈ ಹಿಂದೆ ಜಮೀನಿನ ವಿಚಾರದಲ್ಲಿ ಜಗಳ ಆಗಿದ್ದು, ನಮಗೂ ಆರೋಪಿಗಳಿಗೂ ಮಾತುಕತೆ ಇರಲಿಲ್ಲ. ದಿನಾಂಕಃ 16.03.2022 ರಂದು ನಾನು ನನ್ನ ತಮ್ಮ ಶಿವಲಿಂಗೇಗೌಡರವರ ಮನೆಗೆ ಅವರ ಮಗಳ ಮದುವೆ ವಿಚಾರವಾಗಿ ಹೋಗಿದ್ದೆ. ಆಗ ಬೆಳಿಗ್ಗೆ 8.30ರ ಸಮಯದಲ್ಲಿ 1 ಮತ್ತು 2ನೇ ಆರೋಪಿಗಳು ಶಿವಲಿಂಗೇಗೌಡರ ಮನೆಯ ಬಳಿ ಬಂದು, ನನ್ನನ್ನು ಉದ್ದೇಶಿಸಿ ಉದ್ದೇಶಿಸಿ ಬೋಳಿಮಗನೇ, ಸೂಳೇಮಗನೇ ಎಂದು ಬೈಯ್ಯುತ್ತಿದ್ದರು. ಅಷ್ಟಕ್ಕೆ ನಾನು ಮನೆಯಿಂದ ಹೊರಗೆ ಬಂದು ಏಕೆ ಬೈಯ್ಯುತ್ತಿದ್ದೀರಾ ಎಂದು ಕೇಳಿದ್ದಕ್ಕೆ 1ನೇ ಆರೋಪಿಯು ನನ್ನನ್ನು ಹಿಡಿದು ತಬ್ಬಿಕೊಂಡಿದ್ದು, 2ನೇ ಆರೋಪಿಯು ಕೈಯಿಂದ ನನ್ನ ಬೆನ್ನಿಗೆ ಹೊಡೆದಿರುತ್ತಾರೆ. ಆಗ ಚಾಸಾ1ರವರು ಮನೆಯಿಂದ ಹೊರಗೆ ಬಂದು ಯಾಕೆ ಹೊಡೆಯುತ್ತಿದ್ದೀರಿ ಎಂದು ಕೇಳಿದ್ದಕ್ಕೆ 2ನೇ ಆರೋಪಿಯು ಚಾಸಾ1ರವರನ್ನು ಹಿಡಿದುಕೊಂಡಿದ್ದು, 1ನೇ ಆರೋಪಿಯು ಅವರ ಸೀರೆ ಸೆರಗನ್ನು ಹಿಡಿದು ಎಳೆದಾಡಿ ಕೆಳಕ್ಕೆ ಬೀಳಿಸಿರುತ್ತಾರೆ. ನಂತರ 1 ನೇ ಆರೋಪಿಯು ಚಾಸಾ1ರವರ ಬಲತೊಡೆಗೆ ತುಳಿದಿರುತ್ತಾರೆ. ಆರೋಪಿಗಳಿಬ್ಬರೂ ಚಾಸಾ1ರವರಿಗೆ ಮೈಕೈಗೆ ತುಳಿದಿರುತ್ತಾರೆ. ಅಷ್ಟಕ್ಕೆ ಚಾಸಾ3ರವರು ಅಲ್ಲಿಗೆ ಬಂದಿರುತ್ತಾರೆ. ಆಗ ಆರೋಪಿಗಳು ಚಾಸಾ3ರವರಿಗೂ ಸಹ ಮೈಕೈಗೆ ಹೊಡೆದಿರುತ್ತಾರೆ. ಅಷ್ಟಕ್ಕೆ ಚಾಸಾ4 ಮತ್ತು 5ರವರು ಬಂದು ಜಗಳ ಬಿಡಿಸಿರುತ್ತಾರೆ. ನಂತರ ಆರೋಪಿಗಳು ಈ ದಿನ ಉಳಿದುಕೊಂಡಿದ್ದೀಯಾ ಇನ್ನೊಮ್ಮೆ ಸಿಕ್ಕು ನಿನ್ನನ್ನು

ಬಿಡುವುದಿಲ್ಲ ಎಂದು ಬೆದರಿಕೆ ಹಾಕಿರುತ್ತಾರೆ. ನಂತರ ಚಾಸಾ6ರವರು ನಮ್ಮನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ.

ಇದಾದ ಮಾರನೆ ದಿನ ಪೊಲೀಸರು ಕೃತ್ಯ ನಡೆದ ಸ್ಥಳ ಕ್ಕೆ ಬಂದಿದ್ದು, ಸಂಜೆ 4 ರಿಂದ 4.30ರವರೆಗೆ ಮಹಜರ್ ಮಾಡಿರುತ್ತಾರೆ. ಮಹಜರ್ ಕಾಲದಲ್ಲಿ ಚಾಸಾ7 ಮತ್ತು 8ರವರು ಹಾಜರಿದ್ದರು. ಸಾಕ್ಷಿಗೆ ಮಹಜರನ್ನು ತೋರಿಸಲಾಗಿ ಅದರಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು, ಮಹಜರನ್ನು ನಿಪಿಃ 2 ಎಂದೂ, ಸಾಕ್ಷಿ ಸಹಿಯನ್ನು ನಿಪಿಃ2(ಎ) ಎಂದೂ ಗುರುತಿಸಲಾಯಿತು.

ಪಾಟೀಸವಾಲುಃ ಆರೋಪಿಗಳ ಪರ ಶ್ರೀ ಸಿ ವಿ ಆರ್. ವಕೀಲರಿಂದಃ

ಘಟನೆ ನಡೆದಾಗ ಮನೆಯಲ್ಲಿ ಶಿವಲಿಂಗೇಗೌಡ ಮತ್ತು ಆತನ ಮನೆಯವರು ಮನೆಯಲ್ಲೇ ಇದ್ದರು. ನಮ್ಮ ಮನೆ ಮತ್ತು ಶಿವಲಿಂಗೇಗೌಡರ ಮನೆ ಬೇರೆ ಬೇರೆ ಬೀದಿಯಲ್ಲಿ ಇದೆ ಎಂದರೆ ಸರಿ. ಘಟನೆ ನಡೆದಾಗ ಬೇರೆ ಸಾರ್ವಜನಿಕರು ಇದ್ದರೋ ಇಲ್ಲವೋ ನಾನು ಗಾಬರಿಯಲ್ಲಿ ಗಮನಿಸಲಿಲ್ಲ. ಘಟನೆ ನಡೆದ ಸ್ಥಳದ ಅಕ್ಕಪಕ್ಕ ವಾಸದ ಮನೆಗಳು ಇವೆ ಎಂದರೆ ಸರಿ. 1ನೇ ಆರೋಪಿಯ ಮನೆ ಘಟನೆ ನಡೆದ ಸ್ಥಳ ದಿಂದ ಬೇರೆ ಬೀದಿಯಲ್ಲಿ ಇದೆ. 1ನೇ ಆರೋಪಿಗೆ ನಾನು ಸ್ವಂತ ಚಿಕ್ಕಪ್ಪ ಆಗಬೇಕು ಎಂದರೆ ಸರಿ. ಈ ದೂರನ್ನು ನೀಡುವ ಮೊದಲು ನಮಗೂ ಆರೋಪಿಗಳಿಗೂ ವಿಶ್ವಾಸ ಚೆನ್ನಾಗಿತ್ತು ಎಂದರೆ ಸಾಕ್ಷಿ ಜಮೀನಿನ ತಕರಾರು ಬರುವ ಮೊದಲು ಚೆನ್ನಾಗಿದ್ದೆವು ಎಂದು ನುಡಿಯುತ್ತಾರೆ. ಈಗ ಮೂರು ನಾಲ್ಕು ವರ್ಷಗಳಿಂದ ಜಮೀನಿನ ತಕರಾರು ಇದೆ. 1ನೇ ಆರೋಪಿಯು ಜಮೀನಿನ ವಿಚಾರವಾಗಿ ನನ್ನ ಮತ್ತು ಚಾಸಾ 6ರವರ ವಿರುದ್ಧ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹೂಡಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಸದರಿ ದಾವೆ ಈಗ ಮೂರು ತಿಂಗಳ ಹಿಂದೆ ತೀರ್ಮಾನ ಆಗಿ ನಮ್ಮ ಕಡೆ ತೀರ್ಪು ಬಂದಿರುತ್ತದೆ ಎಂದು ನುಡಿಯುತ್ತಾರೆ. ನಾನು ಈ ಮೊದಲು ನಮ್ಮ ಗ್ರಾಮದಲ್ಲಿ ನಮ್ಮ ಸಮುದಾಯಕ್ಕೆ ಮುಖಂಡನಾಗಿದ್ದೆ ಎಂದರೆ ಸರಿ.

ನಾನು ಮುಖಂಡನಾಗಿದ್ದಾಗ ರಾಮಮಂದಿರ ದೇವಸ್ಥಾನಕ್ಕೆ ಹಣವನ್ನು ಗ್ರಾಮಸ್ಥರಿಂದ ಸಂಗ್ರಹ ಮಾಡಿದ್ದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಅದಕ್ಕೆ ಪ್ರತ್ಯೇಕ ಕಮಿಟಿ ಇದ್ದು, ಅವರು ಸಂಗ್ರಹ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಹಣ ನನ್ನ ಬಳಿ ಇತ್ತು ಎಂದರೆ ಸರಿಯಲ್ಲ. ಸದರಿ ಹಣವನ್ನು ನಾನು ದುರುಪಯೋಗ ಮಾಡಿಕೊಂಡಿದ್ದೆ ಎಂದು ಊರಿನಲ್ಲಿ ಪಂಚಾಯಿತಿ ನಡೆದಿತ್ತು ಎಂದರೆ ಸರಿಯಲ್ಲ. ಈ ಸಂಬಂಧವಾಗಿ ಊರಿನ ಜನರು ಹಣ ದುರುಪಯೋಗ ಆಗಿರುವುದರಿಂದ ನನ್ನನ್ನು ಸಮುದಾಯದ ಯಜಮಾನತನದಿಂದ ತೆಗೆದುಹಾಕಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನನಗೆ ವಯಸ್ಸಾದ ಕಾರಣ ನಾನೇ ಯಜಮಾನತನವನ್ನು ಬಿಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಇದಾದ ನಂತರ 1ನೇ ಆರೋಪಿಯನ್ನು ನಮ್ಮ ಸಮುದಾಯದ ಯಜಮಾನರಾಗಿ ಆಯ್ಕೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ನಾನು ದುರುಪಯೋಗಪಡಿಸಿಕೊಂಡ ಹಣವನ್ನು ಕಟ್ಟಬೇಕೆಂದು ಪಂಚಾಯಿತಿಯಲ್ಲಿ ತೀರ್ಮಾನ ಆಗಿ ಚಾಸಾ4ರವರು ತಾವು ನನ್ನ ಪರವಾಗಿ ಹಣ ಕಟ್ಟಿಕೊಡುತ್ತೇನೆ ಎಂಬುದಾಗಿ ಜವಾಬ್ದಾರಿ ತೆಗೆದುಕೊಂಡಿದ್ದರು ಎಂದರೆ ಸರಿಯಲ್ಲ. ಈ ಘಟನೆಗಳು ಆದ ನಂತರ ನಮಗೂ ಮತ್ತು 1ನೇ ಆರೋಪಿಗೂ ಮಾತುಕತೆ ಇರಲಿಲ್ಲ ಎಂದರೆ ಸರಿ. ನನ್ನಿಂದ ದುರುಪಯೋಗ ಆದ ಹಣವನ್ನು ವಸೂಲಿ ಮಾಡುವಂತೆ ಗ್ರಾಮದ ಯಜಮಾನರು 1ನೇ ಆರೋಪಿಗೆ ಒತ್ತಡ ತರುತ್ತಿದ್ದರು ಎಂದರೆ ಸರಿಯಲ್ಲ.

ಆರೋಪಿಗಳು ಹೊರಗಡೆ ಬಾ ಎಂಬುದಾಗಿ ನನ್ನ ಹೆಸರನ್ನು ಕರೆದಿರುತ್ತಾರೆ. ಘಟನೆ ನಡೆದಾಗ ಅಕ್ಕಪಕ್ಕದ ಮನೆಯವರು ಯಾರೂ ಜಗಳ ಬಿಡಿಸಲು ಬರಲಿಲ್ಲ. ನನಗೆ ಯಾವುದೇ ರಕ್ತಗಾಯಗಳು ಆಗಿರಲಿಲ್ಲ. ಘಟನೆ ನಡೆದ ಸ್ಥಳ ಮಣ್ಣಿನ ರಸ್ತೆಯಾಗಿರುತ್ತದೆ. ಆರೋಪಿ ಚಾಸಾ1ರವರ ಮೇಲೆ ಹಲ್ಲೆ ಮಾಡಿ ಸೀರೆಯನ್ನು ಎಳೆದಾಗ ಅವರು ಯಾವ ಬಣ್ಣದ ಸೀರೆ ಧರಿಸಿದ್ದರು ಎಂಬುವುದು ಈಗ ಹೇಳಲು ಆಗುವುದಿಲ್ಲ.
ಸದರಿ ಸೀರೆಯನ್ನು ನಾವು ಪೊಲೀಸರಿಗೆ ನೀಡಿರುವುದಿಲ್ಲ. ಹಲ್ಲೆಯಿಂದ ಚಾಸಾ1ರವರಿಗೆ ರಕ್ತಗಾಯ ಆಗಿರಲ್ಲ ಆದರೆ ಅವರ ಎಡಗೈ ಹೆಬ್ಬೆರಳನ್ನು ಮುರಿದಂತೆ ಆಗಿರುತ್ತದೆ.

ಆರೋಪಿಗಳು ನಮ್ಮ ಮೇಲೆ ಹಲ್ಲೆ ಮಾಡಿದರು ಎಂದು ನಾನು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ಘಟನೆ ನಡೆದಿಲ್ಲಾ ಎಂದರೆ ಸರಿಯಲ್ಲ. ಗ್ರಾಮಸ್ಥರಿಂದ ನಾನು ಸಂಗ್ರಹಿಸಿದ್ದ ಹಣದ ವಿಚಾರವಾಗಿ ಮತ್ತು ಜಮೀನಿನ ತಕರಾರಿನ ವಿಚಾರವಾಗಿ ಆರೋಪಿಗಳ ಮೇಲೆ ನಮಗೆ ಮನಸ್ತಾಪ ಇದ್ದುದರಿಂದ ನಾನು ಮತ್ತು ಚಾಸಾ 6ರವರು ಚಾಸಾ1ರವರ ಮೂಲಕ ಸುಳ್ಳು ದೂರನ್ನು ಕೊಡಿಸಿದ್ದೇವೆ ಎಂದರೆ ಸರಿಯಲ್ಲ. ನನಗಾಗಲೀ ಚಾಸಾ1ರವರಿಗಾಗಲೀ ಯಾವುದೇ ಗಾಯಗಳು ಆಗಿರಲಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಂದೆ ಯಾವುದೇ ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲಾ.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇ ಒ.,

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಚಾಮರಾಜನಗರ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ಯವರ ನ್ಯಾಯಾಲಯ, ಚಾಮರಾಜನಗರ .

ಸಿಸಿ. 1806/2022

| | | |
|---|---|---|
| ಸಾಕ್ಷಿದಾರರು ಹೆಸರು | : ಶಿವಮ್ಮ | ದಿನಾಂಕಃ 11.07.2024ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು. |
| ಗಂಡನ ಹೆಸರು | : ಶಿವಣ್ಣ | |
| ವಯಸ್ಸು | : 50ವರ್ಷ | |
| ಉದ್ಯೋಗ | : ವ್ಯವಸಾಯ | **CW-1** |
| ವಾಸಸ್ಥಳ | : ಪಣ್ಯದಹುಂಡಿ ಗ್ರಾಮ | **PW-1** |

ಮುಖ್ಯ ವಿಚಾರಣೆ : ಮಾನ್ಯ ಎಪಿಪಿರವರಿಂದಃ

ಆರೋಪಿಗಳು ನಮ್ಮ ಊರಿನವರು. ಈ ದಿನ ನ್ಯಾಯಾಲಯದ ಮುಂದೆ 2ನೇ ಆರೋಪಿ ಹಾಜರಿದ್ದು, 1ನೇ ಆರೋಪಿ ಹಾಜರಿರುವುದಿಲ್ಲ. ಆರೋಪಿಗಳ ಗುರುತಿಸುವಿಕೆಯ ಬಗ್ಗೆ ತಕರಾರು ಇಲ್ಲಾ ಎಂದು ಆರೋಪಿಗಳ ಪರ ವಕೀಲರು ತಿಳಿಸಿರುತ್ತಾರೆ.

ಚಾಸಾ2 ನನ್ನ ಗಂಡ. ಚಾಸಾ3 ನನ್ನ ಮೊಮ್ಮಗ. ಚಾಸಾ4 ಮತ್ತು 5ರವರು ಪರಿಚಯ ಇರುತ್ತಾರೆ. ಚಾಸಾ6 ನನ್ನ ಮಗ. ನಮಗೂ ಆರೋಪಿಗಳಿಗೂ ಈ ಹಿಂದೆ ಜಮೀನಿನ ವಿಚಾರದಲ್ಲಿ ಜಗಳ ಆಗಿದ್ದು, ನಮಗೂ ಆರೋಪಿಗಳಿಗೂ ಮಾತುಕತೆ ಇರಲಿಲ್ಲ. ಈಗ ಎರಡು ವರ್ಷದ ಹಿಂದೆ ಬೆಳಿಗ್ಗೆ 8.30ರ ಸಮಯದಲ್ಲಿ 1 ಮತ್ತು 2ನೇ ಆರೋಪಿಗಳು ನಮ್ಮ ಮನೆಯ ಬಳಿ ಬಂದು, ಚಾಸಾ1ರವರನ್ನು ಉದ್ದೇಶಿಸಿ ಬೋಳಿಮಗನೇ, ಸೂಳೇಮಗನೇ ಎಂದು ಬೈಯ್ಯುತ್ತಿದ್ದರು. ಅಷ್ಟಕ್ಕೆ ಚಾಸಾ2ರವರು ಮನೆಯಿಂದ ಹೊರಗೆ ಬಂದು ಏಕೆ ಬೈಯ್ಯುತ್ತಿದ್ದೀರಾ ಎಂದು ಕೇಳಿದ್ದಕ್ಕೆ 1ನೇ ಆರೋಪಿಯು ಚಾಸಾ2ರವರ ಬೆನ್ನಿಗೆ ಕೈಯಿಂದ ಹೊಡೆದಿರುತ್ತಾರೆ. ಆಗ ನಾನು ಬಂದು ಯಾಕೆ ಹೊಡೆಯುತ್ತಿದ್ದೀರಿ ಎಂದು ಕೇಳಿದ್ದಕ್ಕೆ 1ನೇ ಆರೋಪಿಯು ನನ್ನ ಸೀರೆ ಸೆರಗನ್ನು ಹಿಡಿದು ಎಳೆದಾಡಿ ಕೆಳಕ್ಕೆ ಬೀಳಿಸಿರುತ್ತಾರೆ. ನಂತರ 1 ಮತ್ತು 2ನೇ ಆರೋಪಿಗಳು ನನ್ನ ಮೈಕೈಗೆ ಕಾಲಿನಿಂದ ತುಳಿದಿರುತ್ತಾರೆ. 1ನೇ ಆರೋಪಿಯು ನನ್ನ ಬಲತೊಡೆಯನ್ನು ತುಳಿದಿರುತ್ತಾರೆ. ಅಷ್ಟಕ್ಕೆ ನಾನು ಕೂಗಿಕೊಂಡಾಗ ಚಾಸಾ3ರವರು ಅಲ್ಲಿಗೆ ಬಂದಿರುತ್ತಾರೆ. ಆಗ ಆರೋಪಿಗಳು ಚಾಸಾ3ರವರಿಗೂ ಸಹ ಮೈಕೈಗೆ ಹೊಡೆದಿರುತ್ತಾರೆ. ಅಷ್ಟಕ್ಕೆ ಚಾಸಾ4 ಮತ್ತು 5ರವರು ಬಂದು ಜಗಳ ಬಿಡಿಸಿರುತ್ತಾರೆ. ನಂತರ ಆರೋಪಿಗಳು ನಿನಗೆ ಒಂದು ಗತಿ ಕಾಣಿಸುತ್ತೇವೆ ಎಂಬುದಾಗಿ ಬೆದರಿಕೆ ಹಾಕಿರುತ್ತಾರೆ. ನಂತರ ಚಾಸಾ6ರವರು ನಮ್ಮನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಾವು ಆಸ್ಪತ್ರೆಯಲ್ಲಿದ್ದಾಗ ಪೊಲೀಸರು ಬಂದಿದ್ದು ನಾನು ಚಾಸಾ6ರವರಿಗೆ ವಿವರಿಸಿ ದೂರನ್ನು ಬರೆಸಿ ಪೊಲೀಸರಿಗೆ ನೀಡಿರುತ್ತೇನೆ. ಸಾಕ್ಷಿಗೆ ದೂರನ್ನು ತೋರಿಸಲಾಗಿ ಅದರಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು, ದೂರನ್ನು ನಿಪಿಃ 1 ಎಂದೂ, ಸಾಕ್ಷಿ ಸಹಿಯನ್ನು ನಿಪಿಃ1(ಎ) ಎಂದೂ ಗುರುತಿಸಲಾಯಿತು.

( ಮಾನ್ಯ ಎಪಿಪಿರವರ ಕೋರಿಕೆ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ನೀಡಲಾಯಿತು.)

ಪಾಟೀಸವಾಲುಃ ಮಾನ್ಯ ಎಪಿಪಿರವರಿಂದಃ

ಚಾಸಾ2ರವರು ಮನೆಯಿಂದ ಹೊರಗೆ ಬಂದಾಗ ಆರೋಪಿಗಳು ಅವರನ್ನು ತಬ್ಬಿ ಹಿಡಿದುಕೊಂಡಿರುತ್ತಾರೆ ಎಂದರೆ ಸರಿ.

ಪಾಟೀಸವಾಲುಃ ಆರೋಪಿಗಳ ಪರ ಶ್ರೀ ಸಿ ವಿ ಆರ್. ವಕೀಲರಿಂದಃ

ಘಟನೆ ನಡೆದ ಮನೆ ನನ್ನ ಮೈದುನ ಶಿವಲಿಂಗೇಗೌಡ ರವರಿಗೆ ಸೇರಿದ್ದು, ನಾವು ಮದುವೆ ವಿಚಾರವಾಗಿ ಅವರ ಮನೆಗೆ ಬಂದಿದ್ದೆವು. ಘಟನೆ ನಡೆದಾಗ ಮನೆಯಲ್ಲಿ ಶಿವಲಿಂಗೇಗೌಡ ಮತ್ತು ಆತನ ಮನೆಯವರು ಮನೆಯಲ್ಲೇ ಇದ್ದರು. ಚಾಸಾ4 ಮತ್ತು 5ರವರ ಮನೆಗಳು ಘಟನೆ ನಡೆದ ಸ್ಥಳದಿಂದ ಸುಮಾರು ಹತ್ತು ಮನೆ ಕಳೆದ ನಂತರ ಇದೆ. ಘಟನೆ ನಡೆದಾಗ ಬೇರೆ ಸಾರ್ವಜನಿಕರು ಯಾರೂ ಇರಲಿಲ್ಲ. ಘಟನೆ ನಡೆದ ಸ್ಥಳದಿಂದ 1ನೇ ಆರೋಪಿಯ ಮನೆ ಸುಮಾರು ಒಂದು ಫರ್ಲಾಂಗ್ ದೂರ ಇರುತ್ತದೆ. 1ನೇ ಆರೋಪಿಗೆ ನಾನು ಸ್ವಂತ ಚಿಕ್ಕಮ್ಮ ಆಗಬೇಕು ಎಂದರೆ ಸರಿ. ಈ ದೂರನ್ನು ನೀಡುವ ಮೊದಲು ನಮಗೂ ಆರೋಪಿಗಳಿಗೂ ವಿಶ್ವಾಸ ಚೆನ್ನಾಗಿತ್ತು ಎಂದರೆ ಸಾಕ್ಷಿ ಜಮೀನಿನ ತಕರಾರು ಬರುವ ಮೊದಲು ಚೆನ್ನಾಗಿದ್ದೆವು ಎಂದು ನುಡಿಯುತ್ತಾರೆ. 1ನೇ ಆರೋಪಿಯು ಜಮೀನಿನ ವಿಚಾರವಾಗಿ ಚಾಸಾ2 ಮತ್ತು 6ರವರ ವಿರುದ್ಧ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹೂಡಿದ್ದಾರೆ ಎಂದರೆ ಸರಿ. ಚಾಸಾ2ರವರು ಈ ಮೊದಲು ನಮ್ಮ ಗ್ರಾಮದಲ್ಲಿ ನಮ್ಮ ಸಮುದಾಯಕ್ಕೆ ಮುಖಂಡರಾಗಿದ್ದರು ಎಂದರೆ ಸರಿ. ಚಾಸಾ2ರವರು ಮುಖಂಡರಾಗಿದ್ದಾಗ ರಾಮಮಂದಿರ ದೇವಸ್ಥಾನಕ್ಕೆ ಹಣವನ್ನು ಗ್ರಾಮಸ್ಥರಿಂದ ಸಂಗ್ರಹ ಮಾಡಿದ್ದರು ಎಂದರೆ ಸರಿ. ಚಾಸಾ2ರವರು ಸದರಿ ಹಣವನ್ನು ದುರುಪಯೋಗ ಮಾಡಿಕೊಂಡಿದ್ದಾರೆ ಎಂಬ ಬಗ್ಗೆ ಊರಿನಲ್ಲಿ ಪಂಚಾಯಿತಿ ನಡೆದಿತ್ತು ಎಂದರೆ ಸರಿಯಲ್ಲ. ಈ ಸಂಬಂಧವಾಗಿ ಊರಿನ ಜನರು ಹಣ ದುರುಪಯೋಗ ಆಗಿರುವುದರಿಂದ ಚಾಸಾ2ರವರನ್ನು ಸಮುದಾಯದ ಯಜಮಾನತನದಿಂದ ತೆಗೆದುಹಾಕಿರುತ್ತಾರೆ ಎಂದರೆ ಸಾಕ್ಷಿ ಅವರನ್ನು ಯಜಮಾನತನದಿಂದ ತೆಗೆದಿರುವುದು ನಿಜ ಆದರೆ ಹಣ ದುರುಪಯೋಗ ಆದ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಂತರ 1ನೇ ಆರೋಪಿಯನ್ನು ನಮ್ಮ ಸಮುದಾಯದ ಯಜಮಾನರಾಗಿ ಆಯ್ಕೆ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಚಾಸಾ2ರವರು ದುರುಪಯೋಗಪಡಿಸಿಕೊಂಡ ಹಣವನ್ನು ಕಟ್ಟಬೇಕೆಂದು ಪಂಚಾಯಿತಿಯಲ್ಲಿ ತೀರ್ಮಾನ ಆಗಿ ಚಾಸಾ4ರವರು ತಾವು ಚಾಸಾ2ರವರ ಪರವಾಗಿ ಹಣ ಕಟ್ಟಿಕೊಡುತ್ತೇನೆ ಎಂಬುದಾಗಿ ಜವಾಬ್ದಾರಿ ತೆಗೆದುಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಈ ಘಟನೆಗಳು ಆದ ನಂತರ ನಮಗೂ ಮತ್ತು 1ನೇ ಆರೋಪಿಗೂ ಮಾತುಕತೆ ಇರಲಿಲ್ಲ ಎಂದರೆ ಸರಿ. ಚಾಸಾ2ರವರಿಂದ ದುರುಪಯೋಗ ಆದ ಹಣವನ್ನು ವಸೂಲಿ ಮಾಡುವಂತೆ ಗ್ರಾಮದ ಯಜಮಾನರು 1ನೇ ಆರೋಪಿಗೆ ಒತ್ತಡ ತರುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ.

ಆರೋಪಿ ನನ್ನ ಮೇಲೆ ಹಲ್ಲೆ ಮಾಡಿ ಸೀರೆಯನ್ನು ಎಳೆದಾಗ ನಾನು ಯಾವ ಬಣ್ಣದ ಸೀರೆ ಧರಿಸಿದ್ದೆ ಎಂಬುವುದು ಈಗ ಹೇಳಲು ಆಗುವುದಿಲ್ಲ. ಸದರಿ ಸೀರೆಯನ್ನು ನಾನು ಪೊಲೀಸರಿಗೆ ನೀಡಿರುವುದಿಲ್ಲ. ಹಲ್ಲೆಯಿಂದ ನನಗೆ ಮೂಗಿನ ಮೇಲೆ, ಹಣೆಯ ಮೇಲೆ ಮತ್ತು ಕೆನ್ನೆಯ ಮೇಲೆ

ರಕ್ತಗಾಯವಾಗಿತ್ತು. ಚಾಸಾ2ರವರಿಗೆ ಯಾವುದೇ ರಕ್ತಗಾಯಗಳು ಆಗಿರಲಿಲ್ಲ. ಆರೋಪಿಗಳು ನನ್ನ ಮೇಲೆ ಹಲ್ಲೆ ಮಾಡಿದರು ಎಂದು ನಾನು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ಘಟನೆ ನಡೆದಿಲ್ಲಾ ಎಂದರೆ ಸರಿಯಲ್ಲ. ಗ್ರಾಮಸ್ಥರಿಂದ ಚಾಸಾ2ರವರು ಸಂಗ್ರಹಿಸಿದ್ದ ಹಣದ ವಿಚಾರವಾಗಿ ಮತ್ತು ಜಮೀನಿನ ತಕರಾರಿನ ವಿಚಾರವಾಗಿ ಆರೋಪಿಗಳ ಮೇಲೆ ನಮಗೆ ಇದ್ದ ಮನಸ್ತಾಪ ಇದ್ದುದರಿಂದ ಚಾಸಾ2 ಮತುತ 6ರವರು ನನ್ನ ಮೂಲಕ ಸುಳ್ಳು ದೂರನ್ನು ಕೊಡಿಸಿದ್ದಾರೆ ಎಂದರೆ ಸರಿಯಲ್ಲ. ನನಗಾಗಲೀ ಚಾಸಾ2ರವರಿಗಾಗಲೀ ಯಾವುದೇ ಗಾಯಗಳು ಆಗಿರಲಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲಾ.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇ ಒ.,

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಚಾಮರಾಜನಗರ.